ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 714 (1556)
ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ) : ಮಾನ್ಯ ಸಮಾಜಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳಲ್ಲಿ ಕುಡಿಯುವ ನೀರಿನ ಕೊರತೆ, ಪೌಷ್ಟಿಕಾಂಶವಿಲ್ಲದ ಆಹಾರ ಸರಬರಾಜು ಹಾಗೂ ಶೌಚಾಲಯದ ಕೊರತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು) :

ಅ) ಹೌದು. ಕೆಲವು ವಿದ್ಯಾರ್ಥಿನಿಲಯಗಳಲ್ಲಿ ಕುಡಿಯುವ ನೀರಿನ ಹಾಗೂ ಶೌಚಾಲಯದ ಕೊರತೆ ಇದೆ.

ಆ) ಸ್ವಂತ ಕಟ್ಟಡ ನಿರ್ಮಾಣ ಹಾಗೂ ವಿದ್ಯಾರ್ಥಿ ನಿಲಯಗಳ ದುರಸ್ತಿ ಮಾಡುವ ಮೂಲಕ ನೀರಿನ ಕೊರತೆ, ಶೌಚಾಲಯ ಕೊರತೆ ಸಮಸ್ಯೆಯನ್ನು ನಿವಾರಿಸಲು ಕ್ರಮ ಕೈಗೊಳ್ಳಲಾಗಿದೆ. ಈ ಕಾರ್ಯಕ್ರಮಕ್ಕಾಗಿ ಅಂಬೇಡ್ಕರ್ ಶತಾಬ್ದಿ ಕಾರ್ಯಕ್ರಮಗಳ ಅಂಗವಾಗಿ 3.00 ಕೋಟಿ ರೂಪಾಯಿಗಳನ್ನು ತೆಗೆದಿರಿಸಲಾಗಿದ್ದು, ಈ ಪೈಕಿ ಈಗಾಗಲೇ 2.00 ಕೋಟಿ 16 ಲಕ್ಷ ರೂ. ಗಳನ್ನು ಬಿಡುಗಡೆ ಮಾಡಲಾಗಿದೆ.

1ನೇ ಡಿಸೆಂಬರ್ 92ರ ಮಾಹೆಯಿಂದ ಹೆಚ್ಚಿಸಲಾಗಿರುವ ಬೋಜನ ವೆಚ್ಚವನ್ನು ರೂ.150-00ಗಳಿಂದ ರೂ.250-00ಗಳಿಗೆ ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯಕ್ಕೆ ಹಾಗೂ ರೂ .200-00 ಗಳಿಂದ ರೂ.300-00 ಗಳವರೆಗೆ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಕ್ಕೆ ಹೆಚ್ಚಿಸಿರುವುದರಿಂದ ವಿದ್ಯಾರ್ಥಿಗಳಿಗೆ ಹೆಚ್ಚಿನ ಪೌಷ್ಟಿಕವಿರುವ ಆಹಾರ ನೀಡಲು ಸಾಧ್ಯವಾಗುತ್ತಿದೆ.

<u>ವಿಷಯ :- ರಾಜ್ಯದ ಪುರಸಭೆ / ನಗರಸಭೆಗಳಲ್ಲಿ, ಪರಿಶಿಷ್ಟ ಜಾತಿ / ವರ್ಗಕ್ಕೆ ಮೀಸಲಿಟ್ಟ ಹಣದಲ್ಲಿ ಖರ್ಚಾಗುತ್ತಿರುವ ಹಣ.</u>

Q:1559
ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ರಾಜ್ಯದ ವಿವಿಧ ಪುರಸಭೆ ಹಾಗೂ ನಗರ ಸಭೆಗಳಲ್ಲಿ ಪರಿಶಿಷ್ಟ ಜಾತಿ : ವರ್ಗಕ್ಕೆ ಮೀಸಲಿಟ್ಟಿರುವ ಹಣದಲ್ಲಿ ಶೇಕಡವಾರು ಖರ್ಚಾಗುತ್ತಿರುವ ಹಣ ಎಷ್ಟು? (ಪುರಸಭೆ ಹಾಗೂ ನಗರಸಭಾವಾರು ವಿವರಗಳನ್ನು ಕೊಡುವುದು)

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು) :

1. ರಾಜ್ಯದಲ್ಲಿನ ಪುರಸಭೆ ಮತ್ತು ನಗರಸಭೆಗಳಲ್ಲಿ ಆಯಾ ವರ್ಷದ ಆಯವ್ಯಯದಲ್ಲಿ ಪರಿಶಿಷ್ಟಜಾತಿ; ವರ್ಗಕ್ಕೆ ಮೀಸಲಿಟ್ಟ ಮೊತ್ತದಲ್ಲಿ ಜನವರಿ 1993ರ ಅಂತ್ಯದವರೆಗೆ ಒಟ್ಟು ರೂ.191.50 ಖರ್ಚುಮಾಡಲಾಗಿದೆ. ನಗರಸಭೆ ; ಪುರಸಭಾವಾರು ಶೇಕಡ ಖರ್ಚಾದ ಪಟ್ಟಿ ಲಗತ್ತಿಸಿದೆ.

ಅನುಬಂಧ

ರಾಜ್ಯದ ವಿವಿಧ ನಗರಸಭೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮೀಸಲಿಟ್ಟ ಹಣದಲ್ಲಿ 1992-93ನೇ ಸಾಲಿನ ಜನವರಿ ಅಂತ್ಯದವರೆಗೆ ಶೇಕಡವಾರು ಖರ್ಚಾದ ಹಣದ ವಿವರ :

ಕ್ರಮ ಸಂಖ್ಯೆ	ನಗರಸಭೆ ಹೆಸರು	ಶೇಕಡವಾರು ಖರ್ಚು
1.	ಬಾಗಲಕೋಟೆ	12.33
2.	ಬಳ್ಳಾರಿ	45.54
3.	ಬಿಜಾಪುರ	100.00
4.	ಬೀದರ್	9.81
5.	ಚಿಕ್ಕಮಗಳೂರು	28.05
6.	ಚಿತ್ರದುರ್ಗ	23.28
7.	ದಾಂಡೇಲಿ	35.93
8.	ದಾವಣಗೆರೆ	34.13
9.	ಗದಗ್-ಬೆಟಗೇರಿ	47.82
10.	ಹಾಸನ	39.94
11.	ಹೊಸಪೇಟೆ	65.73
12.	ಕಾರವಾರ	19.46
13.	ಕೋಲಾರ	27.91
14.	ಮಂಡ್ಯ	31.92
15.	ನಿಪ್ಪಾಣಿ	28.04
16.	ರಾಯಚೂರು	55.91
17.	ರಾಬರ್ಟ್‌ಸನ್‌ಪೇಟೆ	12.00
18.	ರಾಣೆಬೆನ್ನೂರು	59.46
19.	ತುಮಕೂರು	21.62

ರಾಜ್ಯದ ಪುರಸಭೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮೀಸಲಿಟ್ಟ ಹಣದಲ್ಲಿ ಶೇಕಡವಾರು ಖರ್ಚಾದ ಹಣದ ವಿವರ.

ಕ್ರಮ ಸಂಖ್ಯೆ	ಪುರಸಭೆ ಹೆಸರು	ಮೀಸಲಾಗಿ ಇಟ್ಟ ಹಣ	ಖರ್ಚಾದ ಹಣ	ಶೇಕವಾರು ಖರ್ಚು
1	2	3	4	5
	ಧಾರವಾಡ ಜಿಲ್ಲೆ			
1.	ಅಳ್ನಾವರ	0.75	0.08	10.66
2.	ನವಲಗುಂದ	0.36	0.06	16.66
3.	ಅಣ್ಣಿಗೇರಿ	1.27	0.22	17.32
4.	ಮುಳಗುಂದ	0.74	-	9.27
5.	ರೋಣ	1.51	0.41	11.11
6.	ನರೇಗ	0.18	0.02	11.11
7.	ಗಜೇಂದ್ರಗಡ	1.50	0.11	7.33
8.	ಮುಂಡರಗಿ	0.44	0.34	77.27
9.	ನರಗುಂದ	0.61	-	-
10.	ಹಾವೇರಿ	3.16	0.21	6.64
11.	ಬ್ಯಾಡಗಿ	0.54	-	-
12.	ಸವಣೂರು	0.35	-	-
13.	ಶಿಗ್ಗಾಂವ	0.44	0.02	4.54
14.	ಕುಂದಗೋಳ್	1.36	0.03	2.20
15.	ಹಾನಗಲ್	0.21	-	-
16.	ಲಕ್ಷ್ಮೇಶ್ವರ	0.19	-	-
	ಬಿಜಾಪುರ ಜಿಲ್ಲೆ			
1.	ಬಸವನಬಾಗೇವಾಡಿ	0.72	-	0.69
2.	ಮುದ್ದೇಬಿಹಾಳ್	2.18	0.06	2.64
3.	ತಾಳೀಕೋಟೆ	3.81	1.30	34.19
4.	ಇಂಡಿ	1.20	-	-
5.	ಸಿಂದಗಿ	0.83	0.56	67.53
6.	ಜಮಖಿಂಡಿ	3.18	1.46	46.00
7.	ರಬಕವಿಬನಹಟ್ಟಿ	5.32	0.77	14.46
8.	ತೆರದಾಳ್	0.88	0.06	6.81
9.	ಮುಧೋಳ್	2.09	0.44	20.95

1	2	3	4	5
10.	ಮಹಾಲಿಂಗಪುರ	1.85	-	-
11.	ಹುನಗುಂದ	0.74	0.12	16.12
12.	ಇಲಕಲ್	4.95	0.71	14.27
13.	ಬಾದಾಮಿ	0.81	-	-
14.	ಕೆರೂರು	1.13	-	0.44
15.	ಗುಳೇದಗುಡ್ಡ	3.23	0.48	15.00
	<u>ಮಡಿಕೇರಿ ಜಿಲ್ಲೆ</u>			
1.	ಮಡಿಕೇರಿ	2.81	1.16	46.25
	<u>ದಕ್ಷಿಣ ಕನ್ನಡ ಜಿಲ್ಲೆ</u>			
1.	ವೈಂದೂರು	0.60	0.18	30.53
2.	ಕುಂದಾಪುರ	1.46	0.82	49.23
3.	ಸಾಲಿಗ್ರಾಮ	0.30	0.02	8.38
4.	ಉಡುಪಿ	2.46	1.84	74.49
5.	ಮುಲ್ಕಿ	2.34	1.94	82.00
6.	ಸುರತ್ಕಲ್	0.80	0.37	53.43
7.	ಮೂಡಬಿದ್ರೆ	0.77	0.48	62.02
8.	ಕಾರ್ಕಳ	1.20	0.73	60.41
9.	ಬಂಟ್ವಾಳ	0.75	0.15	20.11
10.	ಪುತ್ತೂರು	1.95	0.60	30.93
	<u>ಬಳ್ಳಾರಿ ಜಿಲ್ಲೆ</u>			
1.	ಸಿರಗುಪ್ಪ	1.91	0.62	32.46
2.	ತೆಕ್ಕಲಕೋಟೆ	0.04	0.04	-
3.	ಕೊಟ್ಟೂರು	1.01	0.27	26.73
4.	ಹರಪನಹಳ್ಳಿ	0.50	-	-
5.	ಹಡಗಲಿ	0.38	0.06	15.78
6.	ಅಮರಾವತಿ	0.50	0.37	74.00
7.	ಕಮಲಾಪುರ	0.36	-	-
8.	ಕಂಪ್ಲಿ	0.74	0.14	18.91
	<u>ಮೈಸೂರು ಜಿಲ್ಲೆ</u>			
1.	ಹುಣಸೂರು	2.33	1.23	52.77
2.	ಕೆ.ಆರ್.ನಗರ	2.73	1.75	64.25

1	2	3	4	5
3.	ಬನ್ನೂರು	1.35	0.31	22.92
4.	ಕೊಳ್ಳೇಗಾಲ	4.77	2.46	51.51
5.	ಚಾಮರಾಜನಗರ	4.48	2.04	45.56
6.	ನಂಜನಗೂಡು	1.73	0.46	26.62
7.	ಗುಂಡ್ಲುಪೇಟೆ	1.20	0.63	52.32
8.	ಎಂ.ಎಂ.ಬೆಟ್ಟ	0.36	0.04	11.73
9.	ಚಾಮುಂಡಿಬೆಟ್ಟ	0.87	0.15	17.21
	ರಾಯಚೂರು ಜಿಲ್ಲೆ			
1.	ಮಾನ್ವಿ	0.80	0.66	82.96
2.	ಸಿಂದನೂರು	1.31	0.29	22.30
3.	ಗಂಗಾವತಿ	7.06	2.01	28.55
4.	ಕೊಪ್ಪಳ	1.31	0.60	45.69
5.	ಮುದಗಲ್	0.33	0.18	53.40
6.	ಲಿಂಗಸಗೂರು	1.26	0.43	34.28
	ಬೀದರ್ ಜಿಲ್ಲೆ			
1.	ಬಸವಕಲ್ಯಾಣ	2.00	0.72	36.10
2.	ಹುಮನಾಬಾದ್	0.31	0.22	71.54
3.	ಚಿಟಗುಪ್ಪಾ	0.15	0.01	71.54
4.	ಭಾಲ್ಕಿ	0.32	0.03	9.32
	ಚಿಕ್ಕಮಗಳೂರು ಜಿಲ್ಲೆ			
1.	ಕಡೂರು	0.37	0.09	23.92
2.	ಬೀರೂರು	1.20	1.18	98.34
3.	ತರೀಕೆರೆ	0.80	0.82	100.00
4.	ಕುದುರೇಮುಖ	0.10	0.09	91.46
	ಕಾರವಾರ ಜಿಲ್ಲೆ			
1.	ಹಳಿಯಾಳ್	0.48	0.12	25.14
2.	ಸಿರಸಿ	0.94	0.48	51.75
3.	ಕುಮಟಾ	1.00	0.25	24.93
4.	ಹೊನ್ನಾವರ	0.56	0.37	66.24
5.	ಭಟ್ಕಳ	2.68	0.26	37.82

1	2	3	4	5
6.	ಅಂಕೋಲಾ	0.36	0.26	72.70
	ಹಾಸನ ಜಿಲ್ಲೆ			
1.	ಅರಸೀಕೆರೆ	3.33	0.06	1.69
2.	ಚನ್ನರಾಯಪಟ್ಟಣ	5.27	-	-
3.	ಹೊಳೆನರಸೀಪುರ	4.00	0.53	13.26
4.	ಸಕಲೇಶಪುರ	3.60	1.74	48.40
5.	ಬೇಲೂರು	0.95	0.07	7.72
	ಮಂಡ್ಯ ಜಿಲ್ಲೆ			
1.	ಮದ್ದೂರು	3.32	0.47	14.13
2.	ಮಳವಳ್ಳಿ	6.61	0.31	4. 69
3.	ಶ್ರೀರಂಗಪಟ್ಟಣ	0.31	0.06	20.68
4.	ಪಾಂಡವಪುರ	1.97	-	-
5.	ಕೆ.ಆರ್.ಎಸ್.	1.24	-	-
	ಗುಲ್ಬರ್ಗ ಜಿಲ್ಲೆ			
1.	ಅಳಂದ	1.01	0.09	8.91
2.	ಚಿತ್ತಾಪುರ	0.40	0.21	52.50
3.	ಗುರುಮಿಟಕಲ್	0.32	0.12	37.50
4.	ಸೇಡಂ	0.39	0.24	61.53
5.	ಶಹಬಾದ್	0.83	0.81	21.68
6.	ಶಹಾಪುರ	0.50	0.44	88.00
7.	ಸುರಪುರ	0.60	0.15	25.00
8.	ಯಾದಗೀರ್	0.68	0.12	17.64
	ಬೆಂಗಳೂರು ಜಿಲ್ಲೆ			
1.	ಆನೇಕಲ್	2.81	1.53	69.39
2.	ಯಲಹಂಕ	3.70	0.81	22.43
3.	ಐ.ಟಿ.ಐ.ಎನ್‌ಎಸಿ	3.10	0.81	27.34
4.	ಹೆಚ್.ಎ.ಎಲ್.	5.48	4.94	100.00
	ಬೆಂಗಳೂರು ಗಾಮಾಂತರ ಜಿಲ್ಲೆ			
1.	ಹೊಸಕೋಟೆ	2.16	0.25	20.37
2.	ವಿಜಯಪುರ	4.20	0.67	25.47

1	2	3	4	5
3	ದೇವನಹಳ್ಳಿ	1.11	0.19	18.18
4.	ದೊಡ್ಡಬಳ್ಳಾಪುರ	9.29	1.40	19.16
5.	ಮಾಗಡಿ	2.46	0.47	26.42
6.	ರಾಮನಗರ	2.50	-	6.00
7.	ಚನ್ನಪಟ್ಟಣ	4.05	0.62	15.06
8	ಕನಕಪುರ	3.03	1.28	53.46
	<u>ಕೋಲಾರ ಜಿಲ್ಲೆ</u>			
1.	ಬಂಗಾರು ಪೇಟೆ	3.46	2.23	68.20
2.	ಮಾಲೂರು	3.74	0.09	3.74
3.	ಮುಳಬಾಗಿಲು	1.63	0.06	3.68
4.	ಚಿಂತಾಮಣಿ	3.60	0.28	23.33
5.	ಶಿಡ್ಲಘಟ್ಟ	1.20	0.67	58.33
6.	ಚಿಕ್ಕಬಳ್ಳಾಪುರ	2.93	0.48	16.38
7.	ಗೌರಿಬಿದನೂರು	1.86	0.12	11.89
8.	ಕೆ.ಜಿ.ಎಫ್ ಸ್ಯಾಬೋರ್ಡ್	1.81	-	-
	<u>ಚಿತ್ರದುರ್ಗ ಜಿಲ್ಲೆ</u>			
1.	ಚಳ್ಳಕೆರೆ	4.72	0.52	10.80
2.	ಹರಿಹರ	10.48	1.38	23.30
3.	ಹಿರಿಯೂರು	2.50	0.05	18.00
	<u>ತುಮಕೂರು ಜಿಲ್ಲೆ</u>			
1.	ತಿಪಟೂರು	6.03	2.01	38.97
2.	ಶಿರಾ	3.21	0.95	39.87
3.	ಮಧುಗಿರಿ	3.31	0.84	27.19
4.	ಕುಣಿಗಲ್	2.07	0.32	15.45
5.	ಚಿಕ್ಕನಾಯಕನ ಹಳ್ಳಿ	0.91	೦.37	40.05
	<u>ಶಿವಮೊಗ್ಗ ಜಿಲ್ಲೆ</u>			
1.	ಸಾಗರ	4.06	0.77	18.96
2.	ಶಿಕಾರಿಪುರ	0.85	0.21	24.70
3.	ತೀರ್ಥಹಳ್ಳಿ	3.23	0.59	18.26
4.	ಜೋಗ್ ಎನ್ ಎಸಿ	0.37	0.11	29.72

1	2	3	4	5
	ಬೆಳಗಾಂ ಜಿಲ್ಲೆ			
1.	ಖಾನಾಪುರ	0.25	0.07	28.00
2.	ಸಂಕೇಶ್ವರ್	0.50	0.10	20.59
3.	ಬೈಲಹೊಂಗಲ	1.06	0.19	11.35
4.	ಹುಕ್ಕೇರಿ	0.62	0.02	3.90
5.	ಗೋಕಾಕ್	1.00	0.33	33.12

ವಿಷಯ :- ಬೆಂಗಳೂರು ದಕ್ಷಿಣ ತಾಲ್ಲೂಕು ತುಬರ ಹಳ್ಳಿ ಗ್ರಾಮದ ಸರ್ವೆ ನಂ. 6-2, 6-3 ರಲ್ಲಿನ ಜಮೀನನ್ನು ವಸತಿ ಉದ್ದೇಶಕ್ಕಾಗಿ ವಿನಾಯಿತಿ.

Q:1560

ಶ್ರೀ ಗೋಪಾಲ ಮುಕುಂದ ಕಾನಡೆ (ಶಿರಸಿ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ದಕ್ಷಿಣ ತಾಲ್ಲೂಕು ತುಬರನಹಳ್ಳಿ ಗ್ರಾಮದ ಸರ್ವೆ ನಂ.6-2, 6-3ರಲ್ಲಿನ ಜಮೀನನ್ನು ಕೈಗಾರಿಕಾ ಉದ್ದೇಶಕ್ಕಾಗಿ ವಿನಾಯಿತಿ ನೀಡಿದ್ದುದು ನಿಜವಲ್ಲವೆ?

ಆ) ಸದರಿ ಜಮೀನನ್ನು ವಸತಿ ಉಪಯೋಗಕ್ಕಾಗಿ ವಿನಾಯಿತಿ ನೀಡಬೇಕೆಂದು ಜಮೀನಿನ ಮಾಲೀಕರು ಕೋರಿದ್ದುದೂ ನಿಜವಲ್ಲವೆ ?

ಇ) ದಿನಾಂಕ : 9-12-92ರಂದು ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು, ವೈಯಕ್ತಿಕ ವಿಚಾರಣೆ ನಡೆಸಿ, ವಸತಿ ಉದ್ದೇಶಕ್ಕಾಗಿ ವಿನಾಯಿತಿ ನೀಡಿ, ಆದೇಶ ನೀಡಿದ್ದುದೂ ನಿಜವಲ್ಲವೆ?

ಉ) ಹಾಗಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಈವರೆಗೂ ಮಾನ್ಯ ಮಂತ್ರಿಗಳ ಆದೇಶವನ್ನು ಜಾರಿಗೊಳಿಸದಿರುವುದಕ್ಕೆ ಕಾರಣವೇನು?

ಊ) ಈಗಲಾದರೂ ಸರ್ಕಾರದವರು ಮಂತ್ರಿಗಳ ಆದೇಶವನ್ನು ಜಾರಿಗೊಳಿಸದಿರುವ ಬಗ್ಗೆ ವಿಚಾರಣೆ ನಡೆಸಿ ಆದೇಶವನ್ನು ಜಾರಿಗೊಳಿಸುವರೆ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು) :

ಅ) ಹೌದು.

ಆ) ಹೌದು.

ಇ) ದಿನಾಂಕ : 9-12-92 ರಂದು ಈ ವಿಷಯದಲ್ಲಿ ವಿಚಾರಣೆ ನಡೆದಿಲ್ಲ.

ಈ) ಉದ್ಭವಿಸುವುದಿಲ್ಲ.

ಊ) ಉದ್ಭವಿಸುವುದಿಲ್ಲ.